ಐ.ಡಿ.ಎಸ್.ಎಂ.ಟಿ. ಯೋಜನೆಯ ನಿವೇಶನಗಳ ಹಂಚಿಕೆ.

2442(1931)

ಶ್ರೀ ಎಸ್.ಶಿವಣ್ಣ(ತುಮಕೂರು): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಐ.ಡಿ.ಎಸ್.ಎಂ.ಟಿ. ಯೋಜನೆಯಡಿಯಲ್ಲಿ ವಿಂಗಡಿಸಲಾದ ನಿವೇಶನಗಳನ್ನು ಹಂಚಿಕೆದಾರರಿಗೆ ಹಂಚಿಕೆಯಾದ ನಂತರ ಲೀಸ್ ಅವಧಿಯಲ್ಲಿ ಮಾರಾಟ ಮಾಡಲು ಅನುಮತಿ ನೀಡಿರುವ ಸಂಖ್ಯೆ ಎಷ್ಟು?

ಆ) i. ಅನುಮತಿ ನಿಡುವಿಕೆಯಿಂದ ಸರ್ಕಾರ ವಸೂರು ಮಾಡಿದ ಶುಲ್ಕ ಎಷ್ಟು?

ii. ಇದರಿಂದ ಹಂಚಿಕೆದಾರರಿಗೆ ಬಂದ ಲಾಭವೆಷ್ಟು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು):

ಅ) ಒಟ್ಟು 86 ನಿವೇಶನಗಳು

ಆ) i. ಶುಲ್ಕವನ್ನು ವಸೂಲು ಮಾಡಿರುವುದಿಲ್ಲ

ii. ಈ ಬಗ್ಗೆ ಮಾಹಿತಿಯಿಲ್ಲ.

ವಿಜಾಪುರ ನಗರಕ್ಕೆ ಕುಡಿಯುವ ನೀರಿನ ಸಮಸ್ಯೆ.

2443(3115)

ಶ್ರೀ ಉಸ್ತಾದ ಮಹಬೂಬ್ ಲಾಡ್ಲೆ ಪಟೇಲ್(ವಿಜಾಪುರ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರಕ್ಕೆ ಕುಡಿಯುವ ನೀರಿನ ಸಮರ್ಪಕವಾಗಿ ಒದಗಿಸುವ ಬಗ್ಗೆನೀಲಿ ನಕಾಶ್ ಮತ್ತು ಅಂದಾಜು (ಪತ್ರಿಕೆ) ಸರ್ಕಾರದ ಮುಂದೆ ಇದೆಯೇ.

ಆ) ಹಾಗಿದ್ದಲ್ಲಿ ಇದಕ್ಕೆ ಸರ್ಕಾರದ ಮಂಜೂರಾತಿ ನೀಡಿದೆಯೇ?

ಇ) ಹಾಗಿದ್ದಲ್ಲಿ, ಈ ಕೆಲಸ ಯಾವಾಗ ಪ್ರಾರಂಭವಾಗುವುದು?

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು):